# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***<u>ಪತ್ರಿಕಾ ಪ್ರಕಟಣೆ</u>*** **ದಿನಾಂಕ: 25.08.2011**

ಸಿರ್ಸಿ ವೃತ್ತ ಮೇಲುಸೇತುವೆಯ ಮೇಲೆ ಹಾಲಿ ಇದ್ದ ಎಕ್ಸ್‌ಪ್ಯಾನ್‌ಷನ್ ಜಾಯಿಂಟ್‌ಗಳನ್ನು 1999-2000ನೇ ವರ್ಷದಲ್ಲಿ ಮೇಲುಸೇತುವೆಯನ್ನು ನಿರ್ಮಿಸಿದ್ದ ಎಲ್ ಅಂಡ್ ಟಿ ಸಂಸ್ಥೆಯವರು ಅಳವಡಿಸಿದ್ದು, ಈ ಎಕ್ಸ್‌ಪ್ಯಾನ್‌ಷನ್ ಜಾಯಿಂಟ್‌ಗಳು ಹಾಲಿ ಹಾಳಾಗಿದ್ದು, ವಾಹನಗಳ ಓಡಾಟಕ್ಕೆ ಅಡಚಣೆ ಉಂಟು ಮಾಡುತ್ತಿರುತ್ತವೆ. ಎಕ್ಸ್‌ಪ್ಯಾನ್‌ಷನ್ ಜಾಯಿಂಟ್‌ಗಳು ಹಾಳಾಗಿರುವ ಭಾಗದಿಂದ ಮಳೆಯ ನೀರು ಸೇತುವೆಯ ಕೆಳಭಾಗಕ್ಕೆ ಸುರಿದು ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಪಾಲಿಕೆಯು 4 ಬಾರಿ ಟೆಂಡರ್ ಆಹ್ವಾನಿಸಲು ಯಾವುದೇ ಸ್ಪಂದನೆ ಬಂದಿರುವುದಿಲ್ಲ. 5ನೇ ಬಾರಿ ಆಹ್ವಾನಿಸಿದ ಟೆಂಡರ್‌ಗೆ ಮೆ|| ಸಾನ್‌ಫೀಲ್ಡ್ ಇಂಡಿಯಾ ಲಿಮಿಟೆಡ್ ಸಂಸ್ಥೆಯವರು ಅರ್ಹರಾಗಿರುತ್ತಾರೆ.

ಸಿರ್ಸಿ ವೃತ್ತ ಮೇಲುಸೇತುವೆಯ ಮೇಲಿನ ಎಕ್ಸ್‌ಪ್ಯಾನ್‌ಷನ್ ಜಾಯಿಂಟ್‌ಗಳನ್ನು ಬದಲಾಯಿಸುವ ಕಾಮಗಾರಿಗೆ ಪೂಜ್ಯ ಮಹಾಪೌರರು, ಉಪ ಮಹಾಪೌರರು ಮತ್ತು ಆಡಳಿತ ಪಕ್ಷದ ನಾಯಕರು ದಿನಾಂಕ: 25.08.2011 ರಂದು ಔಪಚಾರಿಕವಾಗಿ ಪೂಜೆಯನ್ನು ನೆರವೇರಿಸಿರುತ್ತಾರೆ.

ಗುತ್ತಿಗೆದಾರರಾದ ಮೆ|| ಸಾನ್‌ಫೀಲ್ಡ್ ಇಂಡಿಯಾ ಲಿಮಿಟೆಡ್ ರವರು ಗುತ್ತಿಗೆಯನ್ನು ಪಡೆದಿದ್ದು, ಎಕ್ಸ್‌ಪ್ಯಾನ್‌ಷನ್ ಜಾಯಿಂಟ್‌ಗಳ ವಿನ್ಯಾಸಗಳನ್ನು ಪಡೆದು, ತಯಾರಿಸಿ ಜಾಯಿಂಟ್‌ಗಳನ್ನು ಫಿಕ್ಸ್ ಮಾಡುವ ಕಾರ್ಯವನ್ನು ಅಕ್ಟೋಬರ್ ಮೊದಲ ವಾರದಲ್ಲಿ ಪ್ರಾರಂಭಿಸಲಿದ್ದಾರೆ.

ಗುತ್ತಿಗೆಯ ಮೊತ್ತ ರೂ.2,65,72,000/-, Guarantee period 10 ವರ್ಷಗಳು, ಒಟ್ಟು ಅಳವಡಿಸಬೇಕಾದ ಜಾಯಿಂಟ್‌ಗಳ ಉದ್ದ 194.00 ಮೀಟರ್, ಹಾಲಿ ಅಳವಡಿಸುತ್ತಿರುವ ಎಕ್ಸ್‌ಪ್ಯಾನ್‌ಷನ್ ಜಾಯಿಂಟ್ ಮಾದರಿ ಫಿಂಗರ್ ಟೈಪ್ ಎಕ್ಸ್‌ಪ್ಯಾನ್‌ಷನ್ ಜಾಯಿಂಟ್ ಆಗಿರುತ್ತದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**